ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 01.08.2024.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ**

ನಿಡಿ-5 ನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ, ಇದೆ ದಾವೆ ಮಾಡಿರುತ್ತೇನೆ. ಸುಮಾರು 25-30 ವರ್ಷಗಳ ಹಿಂದೆ 1 ನೇ ಪ್ರತಿವಾದಿ ನನ್ನ ದೊಡ್ಡಪ್ಪನಾದ ಸಿದ್ದಣ್ಣ ಕಲಶೆಟ್ಟಿ ರವರ ಮೇಲೆ ಬೆಂಗಳೂರು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು, ಅದು ಕ್ಲಿಯರ್ ಆಗಿರುತ್ತದೆ, ಏನಾಯಿತು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ದಾವೆ ನಂಬರ ಮತ್ತು ಇತರೆ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಮಾಡುವ ಕಾಲಕ್ಕೆ ಮೇಲೆ ಹೇಳಿದ ಬೆಂಗಳೂರು

ನ್ಯಾಯಾಲಯದ ದಾವೆಯ ಬಗ್ಗೆ ಹೇಳಿಲ್ಲ ಎಂದರೆ ಸರಿ. ಸರ್ವೆ ನಂ.337 ಈ ಜಮೀನು 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ.

ಈ ಕೇಸಿನಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ಮತ್ತು ಯಾವ ದಾಖಲೆ ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.68/3 ಪಹಣಿಗಳಲ್ಲಿ 3 ನೇ ಪ್ರತಿವಾದಿ ಸಂತೋಷಿ ಹೆಸರು ಇರುತ್ತದೆ. ಸದರಿ ಜಮೀನು 17 ಎಕರೆ 24 ಗುಂಟೆ ಇರುತ್ತದೆ. ಸದರಿ ಜಮೀನನ್ನು 3 ನೇ ಪ್ರತಿವಾದಿ ಹೆಸರಿನಲ್ಲಿ ಯಾವ ವರ್ಷ ಮಾಡಿರುತ್ತಾರೆ ಮತ್ತು ಯಾವ ಆಧಾರ ಮೇಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-33 ರ ದಾನಪತ್ರ ರದ್ದಾಗಬೇಕೆಂದು ನಾನು ಕೇಳಿಲ್ಲ ಎಂದರೆ ಸರಿಯಲ್ಲ. ನಿಪಿ-33 ರ ದಾಖಲೆ ಬಗ್ಗೆ ನನಗೆ ಅದನ್ನು ಬರೆದುಕೊಟ್ಟ ದಿನವೇ ಗೊತ್ತಾಯಿತು ಎಂದರೆ ಸರಿಯಲ್ಲ. ನನಗೆ ಸದ್ಯ ಸದರಿ ದಾಖಲೆಯನ್ನು ರದ್ದುಪಡಿಸಿ ಎಂದು ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಾನು ಕಲಬುರಗಿಯಲ್ಲಿ ಖರೀದಿಸಿದ ಮನೆಯ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮತ್ತು ನನ್ನ ಹೆಂಡತಿ ನೌಕರಿ ಮಾಡುತ್ತೇವೆ ಅದರ ಮೇಲೆ ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರಗಳನ್ನು ನಾವು ನೌಕರಿ ಮಾಡುತ್ತಿದ್ದ ವೇತನದಿಂದ ಸದರಿ ಮನೆಯನ್ನು ಖರೀದಿಸಿರುತ್ತೇವೆ ಎಂದು ಬರೆದಿಲ್ಲ ಎಂದರೆ ಸರಿ. ಸದರಿ ಮನೆ ಕಟ್ಟಲಿಕ್ಕೆ ಖರ್ಚು ಮಾಡಿದ ಬಗ್ಗೆ ದಾಖಲೆಗಳನ್ನು ಇಟ್ಟಿಲ್ಲ ಹಾಗೂ ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಸಾಲ ಪಡೆದಷ್ಟು ಮಾತ್ರ ಮನೆ ಕಟ್ಟಲು ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದು, ಆ

ಕಾರಣಕ್ಕಾಗಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಖರೀದಿ ಮಾಡಿದ ನೋಂದಣಿ ಕ್ರಯ ಪತ್ರದ ನಂಬರ 4918 ಮತ್ತು 4917/2002-03 ಇರುತ್ತವೆ ಎಂದರೆ ಸರಿ. ಮೇಲೆ ಹೇಳಿದ ಕ್ರಯ ಪತ್ರದಲ್ಲಿ ನಾನು ನಮ್ಮ ಮೇಲಿನ ಇಲಾಖೆಯಿಂದ ಪರವಾನಿಗೆ ಪಡೆದು ಖರೀದಿಸಿರುತ್ತೇನೆ ಎಂಬ ಉಲ್ಲೇಖ ಇಲ್ಲ ಎಂದರೆ ಸರಿ. ಆದರೆ ನಾನು ಅರ್ಜಿ ಕೊಟ್ಟಿರುತ್ತೇನೆ. ಸದರಿ ಅರ್ಜಿ ಕೊಟ್ಟ ಬಗ್ಗೆ ದಾವೆಯಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿ. ಸರ್ವೆ ನಂ.158/3 ನ್ನು ನನ್ನ ಹೆಂಡತಿಯಾದ ಲಲಿತಾಬಾಯಿ ರವರಿಗೆ ನನ್ನ ಮಾವನಾದ ಗುರುಲಿಂಗಪ್ಪ ರವರು ಮಾಡಿಕೊಟ್ಟಿರುತ್ತಾರೆ. ನನ್ನ ಮಾವ ನನ್ನ ಹೆಂಡತಿ ಹೆಸರಿನನಲ್ಲಿ ಮಾಡಿದ ಮೇಲೆದ ಆಸ್ತಿಯ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

ಸದರಿ ನೋಂದಣಿ ದಾಖಲೆಯಲ್ಲಿ ಕೂಡಾ ನಮ್ಮ ಸ್ವಯಾರ್ಜಿತದಿಂದ ನನ್ನ ಹೆಂಡತಿ ಖರೀದಿಸಿರುತ್ತಾರೆ ಎಂದು ಬರೆದಿಲ್ಲ ಎಂದರೆ ಸರಿ. ನನ್ನ ಹೆಂಡತಿ ಹೆಸರಿನಲ್ಲಿ ನನ್ನ ಮಾವ ಮಾಡಿಕೊಟ್ಟ ನೋಂದಣಿ ದಾಖಲೆ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ. 1981 ರಲ್ಲಿಯೇ ನನ್ನ ತಂದೆ ಜೀವಂತ ಕಾಲಕ್ಕೆ ಪಾಲು ವಾಟ್ನಿಯಾಗಿರುವ ಕಾರಣ, ನನಗೆ ಇನ್ನೊಂದು ವಾಟ್ನಿ ದಾವೆ ಮಾಡುವ ಹಕ್ಕು ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ವಿರುದ್ಧ ಇರುವ ಲಂಚದ ಪ್ರಕರಣದಲ್ಲಿ ಇನ್ನು ಏನು ತಿರ್ಮಾನ ಆಗಿಲ್ಲ ಎಂದರೆ ಸರಿ. ಅದನ್ನು ನನ್ನ ತಮ್ಮ ಸುಳ್ಳಾಗಿ ಮಾಡಿಸಿರುತ್ತಾನೆ. ಆ ಕೇಸಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**